


ಘಟನೆಗಳನ್ನು ಚಿತ್ರಗಳಲ್ಲಿ ಸೆರೆಹಿಡಿಯುವವರೂ ಇದ್ದಾರೆ.

ನಾನು ತರೀಕೆರೆಯವರನ್ನು ಮೊದಲು ಪ್ರವೇಶಿಸಿದ್ದು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ತಂದುಕೊಟ್ಟ 'ಕತ್ತಿಯಂಚಿನ ದಾರಿ'ಯ ಮೂಲಕ. ಆಗಿನ್ನು ಎಂ.ಇಡಿ.ಮುಗಿಸಿ ದಾವಣಗೆರೆಯಲ್ಲಿ ಕೆಲಸವಿಲ್ಲದೆ ಲಾಟರಿ ಹೊಡೆಯುತ್ತಿದ್ದೆ. ರಂ.ಶ್ರೀ. ಮುಗಳಿ, ತ.ಸು.ಶಾಮರಾಯರ ಎರಡು ಪುಸ್ತಕಗಳನ್ನು ಉರುಹೊಡೆದು ಇಡೀ ಕನ್ನಡ ಸಾಹಿತ್ಯವೆ ನನಗೆ ಕರತಲಾಮಲಕವಾಗಿದೆ ಎಂದು ಎದೆಯುಬ್ಬಿಸಿಕೊಂಡು ತಿರುಗುತ್ತಿದ್ದ ಕಾಲವದು. ಪಂಪನ ಕೃತಿ ಪೂರ್ವಪುರಾಣದಿಂದ ಕಡ ಪಡೆದಿದೆ, 'ಪಉಮ ಚರಿಯ' ನಾಗಚಂದ್ರನ 'ರಾಮಚಂದ್ರಚರಿತಪುರಾಣ'ದ ಮೇಲೆ ನೆರಳೊತ್ತಿದೆ. ಪೊನ್ನನ 'ಶಾಂತಿಪುರಾಣ'ದ 1000 ಪ್ರತಿಗಳನ್ನು ಚಿನ್ನದ ಚೌಕಟ್ಟನೊಂದಿಗೆ ಅತ್ತಿಮಬ್ಬೆ ಅಚ್ಚು ಮಾಡಿಸಿದ್ದಳು... ಹೀಗೆ ಮಾಹಿತಿ ಸಂಗ್ರಹಿಸುವುದು ಆಗಿನ ನನ್ನ ಇಶಾರೆಯಾಗಿತ್ತು. 'ಕತ್ತಿಯಂಚಿನ ದಾರಿ'ಯ ಲೇಖಕನ ಮಾತಿನಲ್ಲಿ ಅವರು 'ಕನ್ನಡದ ಮಟ್ಟಿಗೆ ಸಾಹಿತ್ಯದ ವಿದ್ಯಾರ್ಥಿ ಆಗುವುದು ಎಂದರೇನೇ, ರಾಜಕೀಯಪ್ರಜ್ಞೆ ಪಡೆಯುವುದು; ಕವಿರಾಜಮಾರ್ಗ ಮತ್ತು ಬಸವಣ್ಣನ ವಚನಗಳಿಂದ ಮೊದಲುಗೊಂಡು ಇಲ್ಲಿಯ ತನಕ, ಕನ್ನಡ ಸಾಹಿತ್ಯವು ಸುಪ್ತವಾಗಿ ರಾಜಕೀಯ ಪ್ರಜ್ಞೆಯನ್ನು ಧಾರಣೆ ಮಾಡಿಕೊಂಡು ಕಲೆಯಾಗಲು ತುಡಿದಿದೆ'